ಶ್ರೀ ಬಿ. ವಿಠ್ಠಲದಾಸ ಶೆಟ್ಟಿ.—ಈ ತನಕ ಆ ಥೋರಣ್ ಇಲ್ಲ, ಅದನ್ನು ಬೇಕಾದರೆ ಪರಿಶೀಲನೆ ಮಾಡೋಣ. ಈ ತನಕ ಸರ್ಕಾರದ ಥೋರಣ್ ಕೋ ಆಪರೇಟೀವ್ ಸೊಸೈಟಿಗಳಿಗೆ ಬೆಂಬಲ ಕೊಡಬೇಕು ಮತ್ತು ಅದರ ಮುಖಾಂತರ ಈ ಕೆಲಸ ಮಾಡಿಸಿಕೊಳ್ಳಬೇಕೆಂಬ ಥೋರಣ್ ಇದೆ.

ಶ್ರೀ ಗಂಗಾಬೋವಿ.—ತಾವು ನಿಗದಿ ಮಾಡಿರುವ ರೇವಿಯನ್ನು ಸಂಪೂರ್ಣವಾಗಿ ವಸೂಲು ಮಾಡಲು ತಮಗೆ ಹಕ್ಕು ಇದೆ. ರೇವಿ ಕೊಟ್ಟಮೇಲೆ ಸಾದಾರಣವಾಗಿ ಒಂದು ಕೆ.ಜಿ. ಅಕ್ಕಿಯನ್ನೂ ಕೂಡ ಹಳ್ಳಿಗಳಿಗೆ ಕೊಡುವುದಿಲ್ಲ ಇದಕ್ಕೆ ಕಾರಣವೇನು ?

ಶ್ರೀ ಬಿ. ವಿಠ್ಠಲದಾಸ ಶೆಟ್ಟಿ.—ಹಳ್ಳಿಗೆ ಕೊಡುವುದಿಲ್ಲ ಅಂತ ಅನ್ನುವುದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಸರ್ಕಾರದ ಪ್ರಕ್ಯತ ಥೋರಣ್‌ಯ ಪ್ರಕಾರ ಹಳ್ಳಿಗೂ ಕೊಡಬೇಕಾಗುತ್ತದೆ.

Visit of Food Squad to Krishnarajpet

730. **Sri M. K. BOMME GOWDA** (Krishnarajpet).—

Will the Minister of State for Food and Civil Supplies be pleased to state :—

(*a*) the number of times, the Food Squad visited Krishnarajpet during the month of January, 1969 ;

(*b*) the number of villages they have visited and the number of houses they have sealed ;

(*c*) whether the Food Squad visited Singanahalli, Krishnarajpet ;

(*d*) if so, the quantity of paddy and ragi seized ?

Sri B. VITHALDAS SHETTY (Minister of State for Food and Civil Supplies).—

(*a*)	Twice.		
(*b*)	Villages visited	...	4
	Houses sealed	...	Nil
(*c*)	Yes.		
(*d*)	Paddy	...	267-80 qtls.
	Ragi	...	Nil.

ಶ್ರೀ ಎಂ. ಕೆ. ಬೊಮ್ಮೇಗೌಡ.—ಯಾವ ಊರಿನಲ್ಲೂ ಯಾವ ಮನೆಯನ್ನೂ ಮೊಹರು ಮಾಡಿಲ್ಲ ಎಂದು ಹೇಳಿದ್ದೀರಿ, ನಂಗನಹಳ್ಳಿ ಗ್ರಾಮದಲ್ಲಿ 2 ಮನೆಗಳನ್ನು ಮೊಹರು ಮಾಡಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ ?

† ಶ್ರೀ ಬಿ. ವಿಠ್ಠಲದಾಸ ಶೆಟ್ಟಿ.—ಅದು ನಮ್ಮ ಅವಗಾಹನೆಗೆ ಬಂದಿಲ್ಲ, ತಾವು ಹೇಳುವುದು ಸರಿಯಲ್ಲ. ಅಲ್ಲಿ ಪೋಲೀಸ್‌ನವರು ಹೋಗಿದ್ದಾಗ ಕೇನುಗಳನ್ನು ಹಾಕಿದ್ದಾರೆ, ಎರಡು ಮನೆಗಳನ್ನು ಸೀಜ್ ಮಾಡಿದ್ದಾರೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಆ ಊರುಗಳಲ್ಲಿ ತಮಗೆ ಕೊಡಬೇಕಾದ ಇಳುವರಿ ಬತ್ತವನ್ನು ಕೊಟ್ಟಾದ ಮೇಲೆ ಅವರು ಹೋಗಿ ಇವತ್ತೋ ಆಥವಾ ನಾಳೆಯೋ ಡಿಕ್ಲರೇಷನ್ ಕೊಡುವ ಸಂದರ್ಭದಲ್ಲಿ ಅವರ ಮೇಲೆ ಕೇಸು ಮಾಡುವುದಕ್ಕೆ ಏನು ಆಗತ್ಯ ಇತ್ತು ?

ಶ್ರೀ ಬಿ. ವಿಟ್ಠಲದಾಸ ಶೆಟ್ಟಿ.—ಅವರು ಕೊಡುವಂತಹ ಬತ್ತವನ್ನು ಸರ್ಕಾರಕ್ಕೆ ಕೊಟ್ಟಿದ್ದರು. ಆದರೆ ಅವರಲ್ಲಿ ಎಷ್ಟು ಬತ್ತ ಸಂಗ್ರಹ ಇದೆ ಎಂಬುದನ್ನು ಡಿಕ್ಲರೇಷನ್ ಮಾಡಬೇಕೆಂದು ಕಾಯಿದೆ ಇದೆ ಆ ಪ್ರಕಾರ ಅವರು ನಡೆದುಕೊಳ್ಳಲಿಲ್ಲ ಎಂದು ಹೇಳಿ ಪೋಲೀಸ್‌ನವರು ಅವರ ಮನೆಗಳನ್ನು ಸರ್ಚ್ ಮಾಡಿದ್ದಾರೆ.

ಶ್ರೀ ಎಸ್. ಎಂ. ಗುರೆಡ್ಡಿ.—ತಾವು ಈ ರೆವಿ ಪದ್ಧತಿಯನ್ನು ರಾಜ್ಯದಲ್ಲಿ ಅನುಸರಿಸಿದ ನೀತಿ ಏನು ? ತಾವು ನಿಯಮಿಸಿರುವ ಸ್ಕ್ವಾಡ್‌ಗೆ ಹಳ್ಳಿಗಾಡಿನಲ್ಲಿ ಮನೆಗಳನ್ನು ರೇಡ್ ಮಾಡುವುದು ಆಟ್ರಾಸಿಟಿ ಮಾಡುವುದು ಈ ಕಾರ್ಯಾಚರಣೆ ಏನಿದೆ ಇದನ್ನು ತಡೆಗಟ್ಟುವುದಕ್ಕೆ ಕ್ರಮ ತೆಗೆದು ಕೊಳ್ಳುತ್ತೀರಾ ? ಈ ಪೋಲೀಸ್ ಸ್ಕ್ವಾಡ್ ಇಟ್ಟಿರುವ ಉದ್ದೇಶವೇನು ?

ಶ್ರೀ ಬಿ. ವಿಟ್ಠಲದಾಸ ಶೆಟ್ಟಿ.—ಪೋಲೀಸ್ ಸ್ಕ್ವಾಡ್ ಇಟ್ಟಂಥದ್ದು ಬರೀ ರೈತರ ಮೇಲೆ ಉಪದ್ರ ಮಾಡಲಿಕ್ಕೆ ಅಂತ ಹೇಳುವುದನ್ನು ಒಪ್ಪಿಕೊಳ್ಳುವುದಿಲ್ಲ. ಪೋಲೀಸ್‌ನವರು ಅಥವಾ ಇನ್ಸ್‌ಪೆಕ್ಟರಾದರೂ ಅಧಿಕಾರಿಗಳಿಂದ ತೊಂದರೆಯಾಗಿದ್ದರೆ ಅದನ್ನು ತಾವು ದಯವಿಟ್ಟು ಬರೆದು ಸರ್ಕಾರದವರಿಗೆ ತಿಳಿಸಿದರೆ ಸೂಕ್ತವಾಗಿ ಪರಿಶೀಲನೆ ಮಾಡಿ ತಕ್ಕ ಕಾರ್ಯಕ್ರಮ ಕೈಕೊಳ್ಳುತ್ತೇವೆ.

ಶ್ರೀ ಬಿ. ಪಿ. ಗಂಗಾಧರ್.—ಆಹಾರ ನಿಬಂಧನೆಗಳನ್ನು ಸರಿಯಾಗಿ ಕಾರ್ಯಗತ ಮಾಡದೇ ಇರುವುದರಿಂದ ರೈತರಿಗೆ ಬಹಳ ತೊಂದರೆ ಆಗುತ್ತಿದೆ. ಆದ್ದರಿಂದ ಈ ಆಹಾರ ನಿಬಂಧನೆಗಳನ್ನು ಸಂಪೂರ್ಣವಾಗಿ ತೊಡೆದು ಹಾಕುವುದಕ್ಕೆ ಪರಿಶೀಲನೆ ಮಾಡುತ್ತೀರಾ ?

ಶ್ರೀ ಬಿ. ವಿಟ್ಠಲದಾಸ ಶೆಟ್ಟಿ.—ತಮ್ಮ ಅಭಿಪ್ರಾಯ ಗಮನದಲ್ಲಿಟ್ಟುಕೊಳ್ಳಲಾಗುತ್ತದೆ. ಆದರೆ ತಾವು ಕೂಡ ಇದಕ್ಕೆ ಸಹಕಾರ ನೀಡಿದರೆ ಎಲ್ಲಾ ಸರಿಹೋಗುತ್ತದೆ. ಸುಮ್ಮನೆ ಸರ್ಕಾರವನ್ನು ದೂಷಣೆ ಮಾಡಿದರೆ ಪ್ರಯೋಜನವಿಲ್ಲ. ಆದರೆ ಈಗ ಇರತಕ್ಕ ನಿಬಂಧನೆಗಳನ್ನು ತೆಗೆಯುವುದಕ್ಕೆ ಆಗುವುದಿಲ್ಲ.

ಶ್ರೀ ಬಾಪೂಗೌಡ.—ತಾವು ಇಲ್ಲಿ ಉತ್ತರದಲ್ಲಿ ತಿಳಿಸಿರತಕ್ಕ ಬತ್ತವನ್ನು ಅವರು ಮಾರಾಟ ಕ್ಕಾಗಿ ಕೊಂಡಿದ್ದು ಬತ್ತ ಎಂಬುದು ಆ ರೈಡ್ ಮಾಡಿದ ಕಾಲಕ್ಕೆ ಗೊತ್ತಾಗಲಿಲ್ಲವೇ ?

ಶ್ರೀ ಬಿ. ವಿಟ್ಠಲದಾಸ ಶೆಟ್ಟಿ.—ಅವರ ಮನೆಯಲ್ಲಿ ಅಷ್ಟು ಬತ್ತ ಇತ್ತು ಎಂದು ಗೊತ್ತಾಗಿದೆ. ಅವರು ಘಾರಾಟಕ್ಕೆ ಕೊಂಡಿದ್ದ ಬತ್ತ ಅನ್ನುವುದು ಇಲ್ಲಿ ದಾಖಲೆಯಲ್ಲಿ ಇರುವುದಿಲ್ಲ.

ಶ್ರೀ ಲೋಕಯ್ಯ ನಾಯಕ್.—ಸರ್ಕಾರದವರು ರೈತರಿಂದ ಬತ್ತವನ್ನು ಅಂದರೆ ರೆವಿ ಬತ್ತವನ್ನು ತೆಗೆದುಕೊಂಡ ಮೇಲೂ ಅವರಿಗೆ ಕ್ಲಿಯರಾಗಿ ಸರ್ಟಿಫಿಕೇಟನ್ನು ಕೊಡುವುದಿಲ್ಲ. ಅಂಥವರ ಬಗ್ಗೆ ಸರ್ಕಾರದವರು ಏನು ಕಾರ್ಯಕ್ರಮ ಕೈಗೊಳ್ಳುತ್ತಾರೆ ?

ಶ್ರೀ ಬಿ. ವಿಟ್ಠಲದಾಸ ಶೆಟ್ಟಿ.—ಅಂಥ ನಿದರ್ಶನಗಳು ನಮ್ಮ ಗಮನಕ್ಕೆ ಇನ್ನೂ ಬಂದಿಲ್ಲ. ಬಂದರೆ ಅಗತ್ಯವಾದ ಕಾರ್ಯಕ್ರಮ ಕೈಗೊಳ್ಳುತ್ತೇವೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಮಂತ್ರಿಗಳು ಈಗತಾನೆ ಹಳ್ಳಿಗಳಲ್ಲಿರತಕ್ಕವರಿಗೆ ಕ್ರಾಸ್ ಕೊಡುವುದಕ್ಕೆ ಕಾನೂನುಗಳನ್ನು ಮಾಡಲಲ್ಲ ಎಂದು ಹೇಳಿದರು. ಹಾಗಾದರೆ ಏತಕ್ಕೆ ಈ ಫುಡ್ ಸ್ಕ್ವಾಡುಗಳನ್ನು ನೇಮಕ ಮಾಡಿದ್ದಾರೆ ?

(ಉತ್ತರವಿಲ್ಲ)

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಈ ರೆವಿ ಶಾಸನ ಇರತಕ್ಕದ್ದು ಸಣ್ಣ ಜಮೀನ್ದಾರರಿಗೆ ಮಾತ್ರವೋ ಅಥವಾ ದೊಡ್ಡ ಜಮೀನ್ದಾರರಿಗೂ ಅದನ್ನು ಅನ್ವಯಿಸುತ್ತೀರಾ ?

Mr. SPEAKER.—This question is about K. R. Pet only.

ಶ್ರೀ ಬಿ. ವಿಟ್ಠಲದಾಸ ಶೆಟ್ಟಿ.—ಇಬ್ಬರಿಂದಲೂ ವಸೂಲ್ಮಾಡಿದ್ದೇವೆ. ಕಾನೂನು ದೃಷ್ಟಿಯಲ್ಲಿ ಎಲ್ಲರೂ ಒಂದೇ. ನಾವು ಯಾವ ವ್ಯತ್ಯಾಸವನ್ನೂ ಮಾಡಿಲ್ಲ.

ಶ್ರೀ ಬಿ. ಎಂ. ಇದಿನಬ್ಬ.—ದೊಡ್ಡ ಜಮೀನ್ದಾರರು ಯಾರೂ ರೆವಿ ಕೊಡುತ್ತಿಲ್ಲ. ಅವರ ಬಗ್ಗೆ ಇಲ್ಲಿಯವರೆಗೆ ಯಾರೂ ಕ್ರಮ ಕೈಗೊಂಡಿಲ್ಲ ಅದನ್ನು ಸರ್ಕಾರದವರು ಇಲ್ಲಿವರೆಗೇನಾದರೂ ವಿಚಾರಣೆ ಮಾಡಿದ್ದಾರೆಯೇ ?

(No answer)

ಶ್ರೀ ಎನ್. ಎ. ಚನ್ನೇಗೌಡ.—ಈ ವಿಶಿಷ್ಟದಳದವರು ಆ 4 ಹಳ್ಳಿಗಳಲ್ಲಿ ನಣ್ಣ ನಣ್ಣ ಜಮೀನ್ದಾರರ ಹತ್ತಿರ ಲೆವಿ ವಸೂಲ್ಮಾಡಿ ದೊಡ್ಡ ಜಮೀನ್ದಾರರ ಹತ್ತಿರ ಕೇಳುವುದಕ್ಕೆ ಹೋಗಲೇ ಇಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ವಿಠ್ಠಲದಾಸ ಶೆಟ್ಟಿ.—ಇಲ್ಲ.

Sri B. B. SAYANAK.— There are so many levy cases against the Agriculturists. I want to know whether the Government is going to withdraw all the cases.

Mr. SPEAKER.—This question pertains to K. R. Pet Taluk.

ಶ್ರೀ ಎಂ. ನಾಗಪ್ಪ.—ಮಾನ್ಯ ಶ್ರೀ ಗುರಡ್ಡಿಯವರು ಹೇಳಿದ ಹಾಗೆ ಇವರು ರೈತರ ನಲುವಾಗಿ ಅಲ್ಲಿಗೆ ಹೋಗುತ್ತಾರೆಂಬುದನ್ನು ನಾನು ಒಪ್ಪುವುದಿಲ್ಲ. ಫುಡ್ ಸ್ಕ್ಯಾಮ್ಡ್ ಮಾಡಿದಂದೆ ಸಂದರ್ಭ ಎಲ್ಲಾ ರಾಜ್ಯಗಳಲ್ಲಿಯೂ ತುಂಬಾ ಅನ್ಯಾಯವಾಗಿದೆ. ರೈತರಿಗೆ ಸಂಕಷ್ಟ ಹೆಚ್ಚಾಗಿದ ಅಂದರೆ, ಈ ಸ್ಕ್ಯಾಮ್ಡ್‌ನವರು ರೈತರ ಮೇಲೆಯೇ ಕೇಸು ಹಾಕುತ್ತಾರೆ. ಹೊರಗೆ ಹೋಗತಕ್ಕದ್ದನ್ನು ಸರಿಯಾಗಿ ನೋಡಿಕೊಳ್ಳುತ್ತಾ ಇಲ್ಲವೆಂದು ಹೇಳಿದರೆ, ಅದಕ್ಕೇನು ಉತ್ತರ ಕೊಡುತ್ತಾರೆ ?

ಶ್ರೀ ಬಿ. ವಿಠ್ಠಲದಾಸ ಶೆಟ್ಟಿ.—ಮಾನ್ಯ ಶ್ರೀ ನಾಗಪ್ಪನವರು ಹೇಳುವಂಥಾದ್ದು ಸರಿಯಲ್ಲ. ಏಕೆಂದರೆ, ನಾನು ಬೇಕಾದರೆ ಅಂಕಿ ಅಂಶಗಳನ್ನು ಪ್ರತ್ಯೇಕವಾಗಿ ಪ್ರಶ್ನೆ ಕೇಳಿದರೆ ಕೊಡುತ್ತೇನೆ. ಅವರು ನಾಕಷ್ಟು ಕಡೆ ಭೇಟಿ ಮಾಡಿದ್ದಾರೆ. ಬೆಂಗಳೂರು ಸಿಟಿಯಲ್ಲಿಯೂ ಭೇಟಿ ಮಾಡಿದ್ದಾರೆ. ಆದರೆ ಬರೀ ರೈತರ ಮೇಲೆ ಕೇಸು ಮಾಡಿಲ್ಲವೆಂದು ನಾನು ಪುನಃ ಸ್ಪಷ್ಟಪಡಿಸುತ್ತೇನೆ.

ಶ್ರೀ ಐ. ಸೋಮಶೇಖರಪ್ಪ.—ಈ ಸ್ಪೆಷಲ್ ಸ್ಕ್ಯಾಮ್ಡ್ ಡ್ಯೂಟೀಸ್ ಏನು ?

ಶ್ರೀ ಬಿ. ವಿಠ್ಠಲದಾಸ ಶೆಟ್ಟಿ.—ತಪ್ಪಿತಸ್ಥರನ್ನು ಹಿಡಿಯುವುದು ಮತ್ತು ಬಡಿಯುವುದು.

Sri AZEEZ SAIT.—Will the Hon'ble Minister be pleased to say how many quintals of rice, paddy was seized in Krishnarajapet Taluk and what happened to the stock seized paddy ? What is the total quantity of paddy seized ?

Sri B. VITHALDAS SHETTY.—I would request the hon'ble Member to ask a separate question.

Increase of Annual Income Limit for Educational Concession

738. Sri S. R. SHANMUGAM (K.G.F.).—

Will the Minister for Education be pleased to state :—

whether there is any proposal to enhance the annual income of parents from Rs. 2,400 to Rs. 4,000 for purposes of Educational Concession ?

Sri K. V SHANKARA GOWDA (Minister for Education).—No.

ಶ್ರೀ ಎಸ್. ಆರ್. ಷಣ್ಮುಗಂ.—ಪಾಲಕರ ವಾರ್ಷಿಕ ಆದಾಯವನ್ನು 2400 ರೂಪಾಯಿಗಳಿಂದ 4 ಸಾವಿರ ರೂಪಾಯಿಗಳವರೆಗೆ ಇನ್‌ಕ್ರೀಸ್ ಮಾಡುವ ಯೋಚನೆ ಸರ್ಕಾರಕ್ಕೆ ಇದೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಆ ವಿಚಾರ ಸರ್ಕಾರಕ್ಕೆ ಇಲ್ಲ.

ಶ್ರೀ ಎಸ್. ಆರ್. ಷಣ್ಮುಗಂ.—10 ವರ್ಷಗಳಿಂದ ಇದೇ ಆದಾಯ ಪರಿಮಿತಿಯನ್ನು ಹಾಕಿದ್ದೀರಿ. ಮುಂದೇನಾದರೂ ಈ ಪರಿಮಿತಿಯನ್ನು ಹೆಚ್ಚು ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ ?